**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 3839/2021**

| | | | |
|---|---|---|---|
| **ಹೆಸರು** | **:** | **ರಾಜು** | **ಚಾ.ಸಾ. 1** |
| **ತಂದೆಯ ಹೆಸರು** | **:** | **ಹುಲಿಗೆಪ್ಪ** | **ಪ್ರಾ.ಸಾ. 7** |
| **ವಯಸ್ಸು** | **:** | **30 ವರ್ಷ** | **ದಿನಾಂಕಃ 13-05-2025** |
| **ಉದ್ಯೋಗ** | **:** | **ಕೂಲಿ ಕೆಲಸ** | |
| **ವಾಸಸ್ಥಳ** | **:** | **ಕಲ್ಲೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-7 ನನ್ನ ತಮ್ಮ. ಚಾಸಾ-8 ನನ್ನ ದೊಡ್ಡಪ್ಪ. ಚಾಸಾ-9 ನನ್ನ ಸಂಬಂಧಿಕ. ಚಾಸಾ-2 ಮತ್ತು 3 ನನ್ನ ಪಕ್ಕದ ಮನೆಯವರು. ಚಾಸಾ-6 ನನ್ನ ಮಾವ. ಚಾಸಾ-14 ರವರು ನನಗೆ ಗೊತ್ತಿಲ್ಲ. ಮೃತ ರಾಕೇಶ ನನ್ನ ಮಗ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ7 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಇನ್ನೇರಡು ಭಾವಚಿತ್ರಗಳಲ್ಲಿ ನನ್ನ ಮಗ ರಾಕೇಶ ಇರುತ್ತಾನೆ. ಸದರಿ ಭಾವಚಿತ್ರಗಳನ್ನು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು.

ದಿನಾಂಕ 13 ಮಾರ್ಚ್, 4 ವರ್ಷಗಳ ಹಿಂದೆ ಸಾಯಂಕಾಲ 6.30 ರವರೆಗೆ ನಾನು ಕೆಲಸಕ್ಕೆಂದು ಗಣಿಗೆ ಹೋಗಿರುತ್ತೇನೆ. ಸಾಯಂಕಾಲ 6.30 ಗಂಟೆಗೆ ನನ್ನ ಹೆಂಡತಿ ನನಗೆ ಕರೆ ಮಾಡಿ ನನ್ನ ಮಗನಿಗೆ ಚಂದ್ರಶೇಖರ ಕಟ್ಟಡದ ಹತ್ತಿರ ಅಪಘಾತವಾಗಿದೆ ಆದ್ದರಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೇವೆ, ಬೇಗ ಬಾ ಎಂದು ಹೇಳಿದ ಕಾರಣ ಸಾಯಂಕಾಲ 7 ಗಂಟೆ ಸುಮಾರಿಗೆ ನಾನು ಚಿಂಚೋಳಿ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಹೋಗುವಷ್ಟರಲ್ಲಿ ನನ್ನ ಮಗ ಮೃತಪಟ್ಟಿರುತ್ತಾನೆ. ನನ್ನ ಹೆಂಡತಿ ನನಗೆ ಹೇಳಿದ್ದೇನೆಂದರೆ ನನ್ನ ಮಗ ಮನೆಯ ಮುಂದೆ ರಸ್ತೆ ದಾಟುವಾಗ ಒಂದು ದ್ವಿಚಕ್ರ ವಾಹನ ಅಪಘಾತ ಪಡಿಸಿರುತ್ತದೆ ಅದನ್ನು ನಾನು ನೋಡಿದ್ದೇನೆ. ಸದರಿ ದ್ವಿಚಕ್ರ ವಾಹನ ಸವಾರ ಅಪಘಾತ ಪಡಿಸಿ ಅಲ್ಲಿಂದ ಓಡಿ ಹೋಗಿರುತ್ತಾನೆ ಎಂದು ತಿಳಿಸಿರುತ್ತಾರೆ. ದ್ವಿಚಕ್ರ ವಾಹನದ ಸವಾರ ಅಥವಾ ದ್ವಿಚಕ್ರ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ.

ಪೋಲಿಸರು ಆಸ್ಪತ್ರೆಗೆ ಬಂದಾಗ ಅಪಘಾತವಾಗಿದ್ದನ್ನು ಪೋಲಿಸರಿಗೆ ಹೇಳಿದ್ದೇನೆ. ಪೋಲಿಸರಿಗೆ ನೀವು ಏನು ಬೇಕಾದರು ಬರೆದುಕೊಳ್ಳಿ ಎಂದು ಹೇಳಿದ್ದೇನೆ. ಯಾವ ವಾಹನದಿಂದ ಅಪಘಾತವಾಗಿದೆ ಎಂದು ನಾನು ದೂರಿನಲ್ಲಿ ಬರೆಸಿಲ್ಲ. ಸಾಕ್ಷಿಗೆ ದೂರನ್ನು ತೋರಿಸಿ ಕೇಳಿದಾಗ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈಗ ನೋಡುತ್ತಿರುವ ನಿಪಿ-2 ರ ಭಾವಚಿತ್ರದಲ್ಲಿ ನಾನು, ಚಾಸಾ-4, 5 ಮತ್ತು ಪೋಲಿಸರು ಇದ್ದಾರೆ. ನಿಪಿ-2 ರ ಭಾವಚಿತ್ರದಲ್ಲಿರುವ ಸ್ಥಳದಲ್ಲಿ ಅಪಘಾತವಾಗಿದೆ. ಪೋಲಿಸರು ಅಪಘಾತವಾದ ಸ್ಥಳ ವಿಚಾರಣೆ ಮಾಡಲು ಸ್ಥಳಕ್ಕೆ ಬಂದಿದ್ದರು. ಸ್ಥಳದಲ್ಲಿ ಯಾವುದೇ ವಸ್ತುವನ್ನು ಜಪ್ತಿ ಮಾಡಿಲ್ಲ.

ಈ ದಿನದವರೆಗೂ ಸಹ ಯಾರು ಅಪಘಾತ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ದೂರಿನಲ್ಲಿ ಪೋಲಿಸರು ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ದೂರು ಮತ್ತು ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನಾನು ಆ ದಿನ ಚಾಸಾ-6 ರವರಿಗೆ ಕರೆಯಲು ಹೋಗಿದ್ದೆ ಎಂದರೆ ಸರಿ. ಆ ದಿನ ನನ್ನ ಮಗ ನನಗೆ ಕರೆಯಲು ಬಂದ ಎಂದರೆ ಸರಿಯಲ್ಲ. ಆಗ ನನ್ನ ಮಗ ರಸ್ತೆಯಲ್ಲಿ ಬರುತ್ತಿದ್ದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿ ತನ್ನ ದ್ವಿಚಕ್ರ ವಾಹನವನ್ನು ಅತಿ ವೇಗ ಮತ್ತು ನಿಸ್ಕಾಳಜಿತನದಿಂದ ಚಲಾಯಿಸಿ ನನ್ನ ಮಗನಿಗೆ ಡಿಕ್ಕಿ ಪಡಿಸಿರುತ್ತಾರನೆ ಎಂದರೆ ಸಾಕ್ಷಿ ಆಗ ನಾನು ಸ್ಥಳದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆ ಸಮಯಕ್ಕೆ ಚಾಸಾ-6 ರಿಂದ 9 ರವರು ಸ್ಥಳಕ್ಕೆ ಬಂದರು ಎಂದರೆ ಸರಿಯಲ್ಲ. ಆಗ ದ್ವಿಚಕ್ರ ವಾಹನದ ಚಾಲಕ ತನ್ನ ದ್ವಿಚಕ್ರ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಮಾತು ಕೇಳಿ ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಅವನು ಯಾರು ಎಂದು ನನಗೆ ಗೊತ್ತಿಲ್ಲ ಮತ್ತು ಅಪಘಾತ ಹೇಗೆ ಆಯ್ತು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪೋಲಿಸರು ಸ್ಥಳದಿಂದ ಅಪಘಾತ ಪಡಿಸಿದ ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತ ನೋಡಿದ್ದರು ಸಹ ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಮೆ ಪರಿಹಾರ ಹಣ ಪಡೆಯಲು ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನ ಸ್ಥಳವನ್ನು ತೋರಿಸಿದರು ಸಹ ಮತ್ತು ಅಪಘಾತವನ್ನು ನೋಡಿದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ VBD ವಕೀಲರಿಂದಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**